ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೊರೋನಾ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ   ದಿನಾಂಕ : DATE : 3/5/20

# ಗ್ರಾಮಗಳಲ್ಲೂ ಕ್ವಾರಂಟೈನ್ ವ್ಯವಸ್ಥೆ

ಉ.ವಾ - 3/5/20



**ಬೆಂಗಳೂರು:** ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲೂ ಕ್ವಾರಂಟೈನ್ ವ್ಯವಸ್ಥೆ ಮಾಡಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಗಡಿ ಭಾಗದಲ್ಲಿ ಹೊರಗಡೆಯಿಂದ ಜನರು ಬರುತ್ತಿರುವುದರಿಂದ ಕೊರೊನಾ ಹೆಚ್ಚಾಗುತ್ತಿದೆ. ಆದರೆ, ಸೋಂಕು ಹರಡುವಿಕೆ ಸಾಮುದಾಯಿಕವಾಗಿಲ್ಲ. ಮುಂದಿನ ದಿನಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಕ್ವಾರಂಟೈನ್ ವ್ಯವಸ್ಥೆ ಬದಲಾಯಿಸಿ ಗ್ರಾಮೀಣ ಭಾಗಕ್ಕೂ ವಿಸ್ತರಿಸಲಾಗುವುದು ಎಂದು ಹೇಳಿದರು.

ಲಾಕ್‌ಡೌನ್‌ನಿಂದಾಗಿ ರೋಗಾಣು ಸಾಯುವುದಿಲ್ಲ. ರೋಗ ತಡೆಯಲು ಬೇಕಾದ ಸಿದ್ಧತೆ ಮಾಡಿಕೊಳ್ಳಲು ಲಾಕ್‌ಡೌನ್ ಮಾಡಿದ್ದೇವೆ. ಹಿರಿಯರು ಹೆಚ್ಚು ಜಾಗ್ರತರಾಗಿರಬೇಕು. ಮಧ್ಯ ವಯಸ್ಕರು ಯುವಕರು ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕೊರೊನಾ ನಿಯಂತ್ರಿಸುವಲ್ಲಿ ಬಹಳ ಮುಂದಿದೆ ಎಂದರು.

ರಾಜ್ಯದಲ್ಲಿ ಕೊರೊನಾ ಹರಡುವ ಪ್ರಮಾಣ ನಿಯಂತ್ರಣದಲ್ಲಿದೆ ಜನರು ಆತಂಕಗೊಳ್ಳುವ ಅಗತ್ಯವಿಲ್ಲ. ಕೊರೊನಾ ಜೀವ ತೆಗೆಯುವಷ್ಟು ಕೆಟ್ಟ ವೈರಸ್ ಅಲ್ಲ. ಹೊರ ರಾಜ್ಯದಿಂದ ಕಲಬುರ್ಗಿಗೆ 35 ಸಾವಿರ ಜನರು ಬಂದಿದ್ದಾರೆ. ಅವರಲ್ಲಿ 29 ಸಾವಿರ ಜನರು ಚೇತರಿಸಿಕೊಂಡು ವಾಪಸ್ ಆಗಿದ್ದಾರೆ ಎಂದು ಹೇಳಿದರು.

ಯಾದಗಿರಿಗೆ 14,600 ಜನ ಬಂದಿದ್ದಾರೆ. ಅವರಲ್ಲಿ 244 ಜನರಲ್ಲಿ ಪಾಸಿಟಿವ್ ಪ್ರಕರಣ ಇವೆ. ಈಗ 6,022 ತಪಾಸಣೆ ಮಾಡಲಾಗಿದೆ ಯಾರಿಗೂ ರೋಗದ ಲಕ್ಷಣ ಇಲ್ಲ. ಜನರು ಆತಂಕಕ್ಕೆ ಒಳಗಾಗುವುದು ಬೇಡ ಎಂದರು.

ರಾಯಚೂರಿಗೆ 11,300 ಜನ ಬಂದಿದ್ದಾರೆ. ಮಹಾರಾಷ್ಟ್ರದಿಂದ 3,000 ಜನ ಬಂದಿದ್ದಾರೆ. ಅವರಲ್ಲಿ ಶೇ.3ರಷ್ಟು ಜನರಲ್ಲಿ ಪಾಸಿಟಿವ್ ಇದೆ. ಬೀದರ್‌ಗೆ 16,852 ಜನ ಬಂದಿದ್ದಾರೆ. ಅವರಲ್ಲಿ 15,016 ಜನರನ್ನು ತಪಾಸಣೆ ಮಾಡಲಾಗಿದೆ. ಅಲ್ಲಿ ಶೇ. 1ರಷ್ಟು ಮಾತ್ರ ಸೋಂಕು ಕಂಡು ಬಂದಿದೆ ಎಂದು ತಿಳಿಸಿದರು.

ಮುಂಬೈನಿಂದ ಮಂಡ್ಯಕ್ಕೆ 1,564 ಜನರು ಬಂದಿದ್ದಾರೆ. ಅವರಲ್ಲಿ 224 ಜನರಿಗೆ ಪಾಸಿಟಿವ್ ವರದಿ ಬಂದಿದೆ. ಇನ್ನೂ 706 ಜನರ ಫಲಿತಾಂಶವನ್ನು ನಿರೀಕ್ಷಿಸಲಾಗುತ್ತಿದೆ ಎಂದು ಹೇಳಿದರು.

...ಆನ್‌ಲೈನ್ ಬೋಧನೆ | ರಾಜ್ಯ ಸಕಾ...